# ನೀವು ಕೇಳಿದಿರಿ?

ದೇವೀಂದ್ರ ಮರೋಳ, ಮಾಗಳ
*ನಾಟಕಕ್ಕೂ, ಜೀವನಕ್ಕೂ ಏನು ವ್ಯತ್ಯಾಸ?*
ನಾಟಕದಲ್ಲಿನ ಜೀವನಕ್ಕೆ ಶಹಭಾಸ್‌ಗಿರಿ,
ಜೀವನದಲ್ಲಿನ ನಾಟಕಕ್ಕೆ ಮಂತ್ರಿಗಿರಿ!

ಎ.ಎಸ್.ಸ್ವಾಮಿ, ಶೋರಾಪೂರ
*ದೇವರ ಹುಂಡಿಗೆ ಹಣ ಹಾಕುತ್ತಾರಲ್ಲಾ, ದೇವರಿಗೆ ಹಣದ ಅವಶ್ಯಕತೆ ಇದೆಯೇ?*
ದೇವ ಕೇಳ್ವನೇನು ಆ ಹಣವನ್ನು? ಪಾಪ ತೊಳೆಯುವ ಸೋಪಿಗಾಗಿ, ಸ್ವರ್ಗದಲ್ಲಿ ಸೀಟ್ ಬುಕ್ ಮಾಡಲಿಕ್ಕಾಗಿ ಇವರು ಕೊಡುವ ಮುಂಗಡ ಹಣವಂತೆ ಅದು!

ಗಾಯತ್ರಿ, ರಾಜಾಜಿನಗರ
*ಲಂಚ, ಲಂಚ, ಲಂಚ ಎಂಬ ಮೆಗಾಸೀರಿಯಲ್ ತೆಗೆಯಬೇಕೆಂದಿದ್ದೇನೆ, ಸಲಹೆ ಕೊಡುತ್ತೀರಾ?*



ಸೂಕ್ತ ಲಂಚ ಕೊಟ್ಟರೆ ಮಾತ್ರ!

ಪ್ರೆಸ್ ರಾಜಾ, ದೊಡ್ಡಬಳ್ಳಾಪುರ
*ಟೈಮ್ ಚೆನ್ನಾಗಿಲ್ಲ ಎಂದರೆ ಸ್ವಯಂಕೃತಾಪರಾಧವೋ, ಪರಕೃತಾಪರಾಧವೋ?*
ಎರಡೂ ಅಲ್ಲ, ಗಡಿಯಾರದ ಸೆಲ್ ಬದಲಾಯಿಸುವ ಕಾಲ ಬಂದಿದೆ ಎಂದರ್ಥ!

ಹಾಡ್ಯ ಜಯಾನಂದ, ಮೈಸೂರು
*ಗೆಲುವು, ಗೆಲುವಿನ ಅಂತರ ಮತ್ತು ಗೆಲ್ಲಲು ಹಿಡಿದ ದಾರಿ; ಇವುಗಳಲ್ಲಿ ಯಾವುದು ಮುಖ್ಯ?*
ಗೆಲುವೇ! ಗೆದ್ದ ನಂತರ ದಾರಿ, ಅಂತರ ಎಲ್ಲವೂ ಜನಮನದಲ್ಲಿ ಇರದು!

ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ
*ಪರಮಾಪ್ತನಿಗೂ, ಪರಮಾತ್ಮನಿಗೂ ಏನು ವ್ಯತ್ಯಾಸ?*
ಪರಮಾತ್ಮ ಪ್ರಪಂಚಕ್ಕೆ ಮೀಸಲು, ಪರಮಾಪ್ತ ನಮಗೆ ಮಾತ್ರ ಮೀಸಲು!

ಶಾಂತಾಬಾಯಿ ಎಂ ಪೈ, ಹೊನ್ನಾವರ
*ಕೆಲಸಕ್ಕೂ, ಸಮಯಕ್ಕೂ ಏನು ಸಂಬಂಧ?*
ಸಂಬಳ/ಗಿಂಬಳದ ಸಂಬಂಧ!

## ಬಹುಮಾನಿತ ಪ್ರಶ್ನೆ

ಸೊಂ.ನಾ.ಶ್ರೀಧರಮೂರ್ತಿ, ದಾವಣಗೆರೆ
*ಮನುಷ್ಯನು ನಾಲ್ಕು ವಿಷಯಗಳಿಗೆ ಸದಾ ಋಣಿಯಾಗಿರಬೇಕು. ಅವು ಯಾವುವು?*
ಹಸಿರು, ಉಸಿರು, ಬಸಿರು, ನೇಸರು!

ಸವಿರವಿ, ಕೊಪ್ಪ
*ಸುಳ್ಳು ಹೇಳುವುದಕ್ಕೆ ದೇವರ ಆಣೆ ಹಾಕುತ್ತಾರಲ್ಲಾ, ದೇವರ ಗತಿ?*
ಅಮರನಾದ್ದರಿಂದ ಬಚಾವ್! ಆದರೂ ಇವರ ಕೈಗೆ ಸಿಕ್ಕಿದರೆ ತೊಂದರೆ ಎಂದೇ ದೇವನು ಪರ್ಮನೆಂಟಾಗಿ ಗಾಯಬ್ ಆಗಿರುವುದಂತೆ!

ಶಿವರಾಜ ಕೆ. ವಿಭೂತಿ, ಹರಿಹರ
*ಪಾಪದ ಹಣದಿಂದ ತಿಮ್ಮಪ್ಪನಿಗೆ 45ಕೋಟಿ ರೂಪಾಯಿಗಳ ಕಿರೀಟ ಕೊಟ್ಟವರು ಪಾವನರಾದರಂತೆ ಹೌದಾ ಅಂಕಲ್?*
ಇವರು ಪಾವನರಾಗುವ ಮಾತಿರಲಿ, ತಿಮ್ಮಪ್ಪನಿಗೇ ಇವರ ಪಾಪ ತಲೆಗಂಟಿ ಅದರಿಂದ ಹೊರಬರಲು ಹೆಣಗುತ್ತಿದ್ದಾನಂತೆ!

ಎಚ್.ಆನಂದಕುಮಾರ್, ಚಿತ್ರದುರ್ಗ
*ಇಲ್ಲೊಬ್ಬ ಕೂಪಮಂಡೂಕ ಎಲ್ಲ ನನ್ನಿಂದಲೇ ಎನ್ನುತ್ತಿದ್ದಾನೆ. ತಾವೇನು ಹೇಳುತ್ತೀರಿ?*
ಯಾವುದಾದರೂ ತಪ್ಪನ್ನು ಆರೋಪಿಸಿ, ನಿನ್ನಿಂದಲೇ, ನಿನ್ನಿಂದಲೇ ಎನ್ನಲು ಆರಂಭಿಸುತ್ತಾನೆ!

ಕೇಶವ ಎನ್. ಪೈ, ಹೊನ್ನಾವರ
*ಕನ್ನಡಿ ಇಲ್ಲದಿದ್ದರೆ ಕನ್ಯೆಯರ ಅವಸ್ಥೆ ಏನಾಗುತ್ತಿತ್ತು?*
ಅವರದು ಹಾಗಿರಲಿ, ಕವಿಗಳದು? ಅವಳ ಕಣ್ಣ ಗೀಜು, ನೋಡಲೆನಿತು ಮೋಜು ಎಂದೆಲ್ಲಾ ಕವನಿಸುವ ಅವಸ್ಥೆ ಒದಗಿಬರುತ್ತಿತ್ತೋ ಏನೋ.

ವಿ.ಹೇಮಂತಕುಮಾರ್, ಬೆಂಗಳೂರು
*ಕೆಲವು ಕೋಳಿಗಳು ಹೊತ್ತಿಗೆ ಮುಂಚೆಯೇ ಕೂಗುತ್ತವೆಯಲ್ಲ?*



ವಿದೇಶೀ ತಳಿ ಇರಬೇಕು, ಆ ದೇಶದ ನಸುಕಿಗೆ ಸರಿಯಾಗಿ ಕೂಗುತ್ತವೆ!

ಎಂ.ಆರ್.ಪವನ್ ಕುಮಾರ್, ಬಳ್ಳಾರಿ
*ಹುಚ್ಚಿಗೂ, ಸಿಟ್ಟಿಗೂ ಏನು ವ್ಯತ್ಯಾಸ?*
ಅಟ್ಟಿಬಂದ ನಾಯಿಯನ್ನು ಹೊಡೆಯುವುದು ಸಿಟ್ಟು, ನಾಯಿಯನ್ನೇ ಅಟ್ಟಿಸಿಕೊಂಡು ಹೋಗಿ ಹೊಡೆಯುವುದು ಹುಚ್ಚು!

ನಾರಾಯಣ, ಗುಗ್ಗರಹಟ್ಟಿ
*ಸಾರ್, ಮೀನ-ಮೇಷ ಎಣಿಸುವುದು ಹೇಗೆ?*
ಕನ್ಯಾ ಮುಂದೆ ಬಂದಾಗ ಇದು ತಾನಾಗಿಯೇ ತಿಳಿಯುತ್ತದೆ!

ಎಚ್.ಆರ್.ಕಡಿವಾಲ, ಬಾದಾಮಿ
*ಜನಸಂಖ್ಯೆ ತಡೆಗಟ್ಟಲು ಶಾಸನ ಜಾರಿಗೆ ತಂದರೆ ಏನಾಗುತ್ತದೆ?*
ಆ ಶಾಸನ ತಡೆಗಟ್ಟಲ್ಪಡುತ್ತದೆ!

ಜೀವ, ಮಳ್ಳೂರು
*ಆತ್ಮಕಥೆ ಬರೆಯೋಕ್ಕೆ ಕನಿಷ್ಠ ಅರ್ಹತೆ ಏನು?*




ಆತ್ಮ ಇರಬೇಕು ಅಥವಾ ಕಥೆ ಇರಬೇಕು!

ಮಹಾವೀರ ಕಾಸಾರ, ಚನ್ನಗಿರಿ
*ಹಣೆಬರಹ ಯಾವ ಲಿಪಿಯಲ್ಲಿದೆ?*
ಬ್ರಹ್ಮಲಿಪಿ!

ಜೆ ಸುಬ್ಬನಾಯಕ, ಬೊಮ್ಮಲಾಪುರ
*ಹೆಂಡತಿಯನ್ನು ಚಿನ್ನ ಎಂದು ಕರೆಯುತ್ತಾರಲ್ಲಾ, ನಿಜವಾಗಿಯೂ ಚಿನ್ನವಾಗಿದ್ದರೆ ಏನು ಮಾಡುತ್ತಿದ್ದರು?*
ಕರಗಿಸಿ ಬೇಕಾದ ರೀತಿ ಆಭರಣ ಮಾಡಿಸಿಕೊಂಡು ತೊಡುತ್ತಿದ್ದರು!

ಎಂ.ಜಿ.ನೇಹವರ್ಷಿಣಿ, ಬಳ್ಳಾರಿ
*ಅಭಿಮಾನ, ಅವಮಾನ, ಅನುಮಾನ ಇಲ್ಲದ ವ್ಯಕ್ತಿ ಯಾರು ಗುರು?*
ಮಾನ ಇಲ್ಲದವನು!

ಬಿ.ವಿ.ರಾಮಸ್ವಾಮಿ, ಬಾಣಸಂದ್ರ
*ಸ್ವಾಮಿಗಳಿಗೂ ಮಾಟ, ಮಂತ್ರದ ಭಯವೆ?*
ಛೆ, ಅವರಿಗೆಂತಹ ಭಯ! ಮಾಟವಾಗಿರುವವರು ಅವರ ಬಳಿ ಸಾರಿದರೆ ಮಂತ್ರಮುಗ್ಧರಾದಾರೆಂಬುದೊಂದೇ ಜಗದ ಭಯ!

■ ರಾಮ್